ಓ.ಎಸ್. ನಂಃ **17/2022**
ಪಿ ಡಬ್ಲ್ಯೂಃ **2**

ದಿನಾಂಕಃ 23-10-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಗೆ ತೆಲುಗು ಭಾಷೆ ಬರುತ್ತದೆ ಕನ್ನಡ ಭಾಷೆ ಬರುವುದಿಲ್ಲ ಎಂದು ಹೇಳಿದ ಮೇರೆಗೆ ಶ್ರೀ ಜಿ ಆರ್ ವಕೀಲರನ್ನು ಭಾಷಾಂತರಕಾರರನ್ನಾಗಿ ನೇಮಿಸಲಾಯಿತು ಹಾಗೂ ಅವರಿಗೆ ಪ್ರಮಾಣ ವಚನ ಭೊದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯ ಪರವಾಗಿ ಶ್ರೀ ಎಂ ಬಿ ಪಿ ವಕೀಲರಿಂದಃ

ಈ ದಾವೆಯನ್ನು ಯಾರು ಯಾರ ವಿರುದ್ಧ ದಾಖಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ ದಾವಾ ಆಸ್ತಿಗಳ ಸರ್ವೆ ನಂಬರುಗಳು ಗೊತ್ತಿಲ್ಲ, ಆದರೆ ದಾವಾ ಆಸ್ತಿ ಒಟ್ಟು 05 ಎಕರೆ ಹೊಲ ಇರುತ್ತದೆ. ಸದರಿ 05 ಎಕರೆಯಲ್ಲಿ 03 ತುಕಡಿಗಳು ಇರುತ್ತವೆ. ಸದರಿ ಜಮೀನು ಪಹಣಿ ಪತ್ರಿಕೆಯಲ್ಲಿ ಯಾರ ಹೆಸರಿನಲ್ಲಿ ಇದೆ ಎಂಬುದು ನನಗೆ ಗೊತ್ತಿಲ್ಲ.

2. ಬುಡ್ಡಪ್ಪ ರವರಿಗೆ ಇಬ್ಬರು ಜನ ಹೆಂಡತಿಯರು ಇದ್ದಾರೆ. ಸದರಿ ಇಬ್ಬರು ಹೆಂಡತಿಯ ಹೆಸರುಗಳು ನರಸಮ್ಮ ಹಾಗೂ ಲಕ್ಷ್ಮಮ್ಮ ಎಂದು ಇರುತ್ತದೆ. ನರಸಮ್ಮ ಮೊದಲ ಹೆಂಡತಿ ಹಾಗೂ ಲಕ್ಷ್ಮಮ್ಮ 2 ನೇ ಹೆಂಡತಿ ಆಗಿರುತ್ತಾಳೆ. ಬುಡ್ಡಪ್ಪ ಈಗ 25-30 ವರ್ಷಗಳ ಹಿಂದೆ ಮರಣಹೊಂದಿರುತ್ತಾರೆ. ಮೊದಲನೆ ಹೆಂಡತಿ ನರಸಮ್ಮ ಚಂಡರಕಿ ಗ್ರಾಮದವರಾಗಿದ್ದು ಅವರ ತಂದೆಯ ಹೆಸರು ಸಹ ಬುಡ್ಡಪ್ಪ ಎಂದು ಇರುತ್ತದೆ. 2 ನೇ ಹೆಂಡತಿ ಲಕ್ಷ್ಮಮ್ಮ ಸಹ ಚಂಡರಕಿ ಗ್ರಾಮದವರಾಗಿರುತ್ತಾರೆ.

3. ದಾವಾ ಆಸ್ತಿಗಳು ಮೊದಲು ಬುಡ್ಡಪ್ಪ ರವರ ಹೆಸರಿನಲ್ಲಿಯೇ ಇದ್ದವು ಎಂದರೆ ಸರಿ. ಆತ ಮರಣಹೊಂದಿದ ನಂತರ ಲಕ್ಷ್ಮಮ್ಮ ರವರ ಹೆಸರಿಗೆ ವಾರಸಾ ವರ್ಗಾವಣೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಬುಡ್ಡಪ್ಪ ಮರಣಹೊಂದಿದ ನಂತರ ಯಾರ ಹೆಸರಿಗೆ ಖಾತಾ ವರ್ಗಾವಣೆ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಲಕ್ಷ್ಮಮ್ಮ ಈ ಮೊದಲು ಗುರುಮಠಕಲ್ ಪಟ್ಟಣದಲ್ಲಿ ವಾಸವಾಗಿದ್ದರು ಆದರೆ ಅವರು ಈಗ ಜೀವಂತವಾಗಿದ್ದಾರೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಸದರಿ ಲಕ್ಷ್ಮಮ್ಮ ರವರಿಗೆ ಮೂರು ಜನ ಹೆಣ್ಣು ಮಕ್ಕಳು ಇದ್ದರು ಎಂದರೆ ಸಾಕ್ಷಿಯು ಇರಬಹುದು, ನನಗೆ ಗೊತ್ತಿಲ್ಲ ಎಂದು

ನುಡಿಯುತ್ತಾರೆ. 6 ರಿಂದ 8 ನೇ ಪ್ರತಿವಾದಿಯರು ಸದರಿ ಲಕ್ಷ್ಮಮ್ಮ ರವರ ಮಕ್ಕಳಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಬುಡ್ಡಪ್ಪ ಮರಣಹೊಂದಿದ ನಂತರ ಲಕ್ಷ್ಮಮ್ಮ ದಾವಾ ಆಸ್ತಿಗಳ ಮಾಲಿಕರಾಗಿದ್ದರು ಎಂದರೆ ಸರಿಯಲ್ಲ, ಸಾಕ್ಷಿಯು ನರಸಮ್ಮ ಆತನ ಮೊದಲನೆ ಹೆಂಡತಿ ಆಗಿದ್ದರು ಎಂದು ನುಡಿಯುತ್ತಾರೆ. ಲಕ್ಷ್ಮಮ್ಮ ರವರ 6 ರಿಂದ 8 ನೇ ಪ್ರತಿವಾದಿಯರಿಗೆ ಹಕ್ಕು ಬಿಟ್ಟುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಕ್ಕು ಬಿಡುಗಡೆ ಪತ್ರದ ಆಧಾರದ ಮೇಲೆ 6 ರಿಂದ 8 ನೆ ಪ್ರತಿವಾದಿಯರ ಹೆಸರಿಗೆ ಖಾತಾ ಬದಲಾವಣೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ 6 ರಿಂದ 8 ನೇ ಪ್ರತಿವಾದಿಯರು ದಾವಾ ಆಸ್ತಿಯ ಮಾಲಿಕರು ಮತ್ತು ಕಬ್ಜೆದಾರರಾಗಿರುತ್ತಾರೆ ಎಂದರೆ ಸಾಕ್ಷಿಯು ವಾದಿ ದಾವಾ ಆಸ್ತಿಯ ಮಾಲಿಕ ಮತ್ತು ಕಬ್ಜೆದಾರನಾಗಿರುತ್ತಾನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗೂ ಮತ್ತು ವಾದಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನೀವು ಸಲ್ಲಿಸಿರುವ ಸಾಕ್ಷ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನಿಮಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಸರಿ ಎಂದು ನುಡಿಯುತ್ತಾರೆ.

4. ವಾದಿ ತನಗೆ ಬುದ್ದಿ ಬಂದಾಗಿನಿಂದಲೂ ಹೈದ್ರಾಬಾದಿನಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಆತ ಹೈದ್ರಬಾದಿನ ದೌಲತಾಬಾದ್ ನಲ್ಲಿ ವಾಸವಾಗಿದ್ದಾನೆ ಎಂದರೆ ಸರಿಯಲ್ಲ. ವಾದಿಗೂ ಹಾಗೂ ದಾವಾ ಆಸ್ತಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ನಾನು ಆತನ ಮಾತು ಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ**.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ